ಸಿಸಿ. ನಂಃ **76/2022**
**ಪಿ.ಡಬ್ಲ್ಯೂ- 1**

ದಿನಾಂಕಃ 28-03-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಂ.ಪಿ ವಕೀಲರಿಂದಃ

ನಾನು ವ್ಯವಸಾಯಗಾರನಾಗಿದ್ದೇನೆ. ನನಗೆ ದೂರಿನಲ್ಲಿ ಬರೆದಿರುವ ಎಲ್ಲ ಅಂಶಗಳ ಬಗ್ಗೆ ಮಾಹಿತಿ ಇದೆ. ಆರೋಪಿ ಯಾದಗಿರಿಯ ಸಿಂದ್ ಬಾರ್ ನಲ್ಲಿ ಖಾಸಗಿ ಕೆಲಸ ಮಾಡುತ್ತಾರೆ. ಆರೋಪಿ ಎಷ್ಟು ವರ್ಷಗಳಿಂದ ಸದರಿ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂಬುದು ನನಗೆ ಗೊತ್ತಿಲ್ಲ. ನನಗೆ ಆರೋಪಿಯ ಕುಟುಂಬ ಸದಸ್ಯರ ಪೈಕಿ ಆತನ ತಮ್ಮನ ಪರಿಚಯ ಮಾತ್ರ ಇದೆ. ಆರೋಪಿಯ ತಮ್ಮನ ಹೆಸರು ಶರಣಗೌಡ ಎಂದು ಇರುತ್ತದೆ. ಆರೋಪಿಯ ತಮ್ಮ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ತಮ್ಮ ನನ್ನೊಂದಿಗೆ ಮೊಬೈಲ್ ಸಂಪರ್ಕ ಹೊಂದಿರುವುದಿಲ್ಲ.

2. ಸಾಕ್ಷಿಗೆ ದೂರಿನ ಮೊದಲ ಪುಟವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ಮೊತ್ತ ರೂ.5 ಲಕ್ಷ ಬದಲಾಗಿ ರೂ.1,75,000/- ಎಂದು ತಪ್ಪಾಗಿ ನಮೂದಗಿದೆ ಎಂದು ನುಡಿಯುತ್ತಾರೆ. ಆರೋಪಿ ನನಗೆ ಎರಡು ಚೆಕ್ ಗಳನ್ನು ಕೊಟ್ಟಿರುತ್ತಾರೆ. ಇನ್ನೊಂದು ಚೆಕ್ ನನ್ನ ಹತ್ತಿರ ಇದೆ. ಯಾವುದೇ ವ್ಯಕ್ತಿ ಚೆಕ್ ನ್ನು ನೀಡುವಾಗ ಅದರಲ್ಲಿ ಮೊತ್ತ ಹಾಗೂ ದಿನಾಂಕ ನಮೂದಿಸಿ ಕೊಡಬೇಕಾಗುತ್ತದೆ ಎಂದರೆ ಸರಿ.

3. ಆರೋಪಿ ಮನೆ ಕಟ್ಟುತ್ತಿದ್ದು, ಹಣದ ಅವಶ್ಯಕತೆ ಇರುವುದರಿಂದ ನನ್ನಿಂದ ಸಾಲ ಪಡೆದುಕೊಂಡಿದ್ದರು. ಆರೋಪಿ ಹತ್ತಿಕುಣಿ ಗ್ರಾಮದಲ್ಲಿ ಮನೆ ಕಟ್ಟುತ್ತಿದ್ದರು. ನೀವು ದುವಾರಿನ 4 ನೇ ಖಂಡಿಕೆಯಲ್ಲಿ ಮೌನೇಶ ಹಾಗೂ ಹನುಮಂತ ಎಂಬುವವರ ಸಮಕ್ಷಮ ವ್ಯವಹಾರ ಆಗಿದೆ ಎಂದು ಬರೆಸಿದ್ದು, ಅವರುಗಳ ಹೆಸರನ್ನು ನಿಪಿ-3 ರ ನೋಟಿಸಿನಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ಖಂಡಿಯಲ್ಲಿ ಆರೋಪಿ ಕೈಗಡ ಸಾಲ ಪತ್ರ ಬರೆದುಕೊಟ್ಟಿದ್ದಾರೆ ಎಂದು ನಮೂದಿಸಿದ್ದು, ನೋಟಿಸಿನಲ್ಲಿ ಅದನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಪಿ-6(ಬಿ) ಸಹಿಯನ್ನು ತೋರಿಸಿ ಅದು ಆರೋಪಿಯ ಸಹಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು, ಆರೋಪಿ ನನ್ನ ಸಮಕ್ಷಮವೇ ಸದರಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-1(ಎ) ರಲ್ಲಿ ಇರುವ ಆರೋಪಿ ಸಹಿ ಹಾಗೂ ನಿಪಿ-ಹಿ(ಬಿ) ನಲ್ಲಿನ ಸಹಿಯಲ್ಲಿ ಸಾಕಷ್ಟು ವ್ಯತ್ಯಾಸ ಕಂಡುಬರುತ್ತಿದ್ದ, ನಿಪಿ-6(ಬಿ) ಸಹಿಯನ್ನು ನಾನು ಖೊಟ್ಟಿಯಾಗಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

4. ರೂ.50 ಸಾವಿರ ಮೇಲ್ಪಟ್ಟು ಮೊತ್ತದ ವ್ಯವಹಾರಕ್ಕೆ ಸಂಬಂಧಿಸಿದ ಕರಾರು ಪತ್ರವನ್ನು ಕಡ್ಡಾಯವಾಗಿ ನೋಟರಿ ಮಾಡಿಸಬೇಕಾಗುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನೋಟರಿ ಮಾಡಿಸುವ ನಿಯಮ ಗೊತ್ತಿದ್ದರೂ ನಿಪಿ-6 ರ ದಾಖಲೆಯನ್ನು ಆರೋಪಿಗೆ ಗೊತ್ತಿಲ್ಲದಂತೆ ತಯಾರಿಸಿಕೊಂಡಿರುವುದರಿಂದ ಅದನ್ನು ನೋಟರಿ ಮಾಡಿಸಿಲ್ಲ ಎಂದರೆ ಸರಿಯಲ್ಲ.

5. ನಿಮಗೆ ಸಿದ್ದಲಿಂಗರೆಡ್ಡಿ ತಂದೆ ತಿಪ್ಪರೆಡ್ಡಿ ಪೋಲಿಸ್ ಪಾಟೀಲ್, ಸಾಃ ಕಟ್ಟಿಗೆ ಶಹಾಪೂರ ರವರ ಪರಿಚಯ ಇದೆಯೇ ಎಂದರೆ ಸಾಕ್ಷಿಯು ಪರಿಚಯ ಇದೆ ಎಂದು ನುಡಿಯುತ್ತಾರೆ. ಆರೋಪಿ ಯಾದಗಿರಿಯ ಸತ್ಯಂ ವೈನ್ ಶಾಪ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ಗೊತಿತಲ್ಲ ಎಂದು ನುಡಿಯುತ್ತಾರೆ. ಸದರಿ ಸಿದ್ದಲಿಂಗರೆಡ್ಡಿ ನನ್ನಿಂದ ಸಾಲ ಪಡೆದುಕೊಂಡಿದ್ದರು ಹಾಗೂ ಆತ ನನಗೆ ನಿಪಿ-1 ರ ಚೆಕ್ ನ್ನು ತಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು. )

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ